



# ನವಿಲಲ್ಲ; ನವಿಲು ಜೇಡ!

ಭೂಮಂಡಲದಲ್ಲಿರುವ ಜೀವ ಸಂಕುಲಗಳಲ್ಲಿ ಜೇಡಗಳು, ಕೀಟಗಳು ಸಂಧಿಪದಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಒಟ್ಟಾರೆ ಇರುವ ಬಹುಕೋಶ ಜೀವಿಗಳಲ್ಲಿ ಇವು ಶೇ.80ರಷ್ಟು ಇವೆ. ಈ ವರ್ಗಕ್ಕೆ ಸೇರಿದ 500 ಕ್ಕೂ ಹೆಚ್ಚು ಸಂಖ್ಯೆಯ ಹೊಸ ಪ್ರಾಣಿಗಳನ್ನು ಕಳೆದ ವರ್ಷ ಗುರುತಿಸಲಾಗಿದೆ. ಇವುಗಳಲ್ಲೆಲ್ಲಾ ಅತ್ಯಂತ ಸುಂದರವಾದದ್ದು ನವಿಲಿನ ಜೇಡ (ಪೀಕಾಕ್ ಸ್ಪೈಡರ್). ಮಾರಾಟಸ್ ವೊಲಾನ್ಸ್ ಎಂಬ ವೈಜ್ಞಾನಿಕ ಹೆಸರುಳ್ಳ ಈ ಜೇಡವನ್ನು ಹಾರುವ ಜೇಡ ಎಂದೂ ಕರೆಯುತ್ತಾರೆ. ಲ್ಯಾಟಿನ್ ಭಾಷೆಯಲ್ಲಿ ವೊಲಾನ್ಸ್ ಎಂದರೆ ಹಾರುವುದು.

ಅತ್ಯಂತ ಚಿಕ್ಕ ಗಾತ್ರದ ಈ ಜೇಡಗಳು ಸುಮಾರು 5 ಮಿಲಿ ಮೀಟರ್‌ನಷ್ಟು ಉದ್ದವಿರುತ್ತವೆ. ಇವು ಕ್ವೀನ್ಸ್ ಲ್ಯಾಂಡ್, ನ್ಯೂ ಸೌತ್ ವೇಲ್ಸ್, ತಾಸ್ಮೇನಿಯಾ ಹಾಗೂ ಪಶ್ಚಿಮ ಆಸ್ಟ್ರೇಲಿಯಾದ ನಿರ್ದಿಷ್ಟ ಭಾಗಗಳಲ್ಲಿ ಮಾತ್ರ ಕಾಣಸಿಗುತ್ತವೆ. ಈ ಜಾತಿಯ ಜೇಡಗಳಲ್ಲಿ ಗಂಡು ಜೇಡವು ಕೆಂಪು, ಹಳದಿ, ನೀಲಿ ಮುಂತಾದ ಗಾಢ ವರ್ಣಗಳಿಂದ ಕಂಗೊಳಿಸುವ ರೆಕ್ಕೆ ತರಹದ ರಚನೆಗಳನ್ನು ಹೊಂದಿರುತ್ತವೆ. ಉದರದ ಎರಡೂ ಪಾರ್ಶ್ವಗಳಿಂದ ಮೂಡಿರುವ, ಮಡಚಲು ಸಾಧ್ಯವಿರುವಂಥ ಈ ರಚನೆಗಳು ಬಿಳಿಯ ರೋಮಗಳನ್ನು ಹೊಂದಿರುತ್ತದೆ. ಮಿಲನ ಕ್ರಿಯೆಯ ಸಂದರ್ಭದಲ್ಲಿ ಹೆಣ್ಣು ಜೇಡವನ್ನು ಆಕರ್ಷಿಸಲು ಇದನ್ನು ಪ್ರದರ್ಶನ ಮಾಡುತ್ತದೆ. ಗಂಡು ಜೇಡವು ಹೊಟ್ಟೆಯನ್ನು ಎತ್ತರಿಸಿ, ರೆಕ್ಕೆಯಂಥ ರಚನೆಯನ್ನು ಅಗಲವಾಗಿ ತೆರೆದು ಮೇಲಕ್ಕೆ ಎತ್ತಿದಾಗ, ಬಿಳಿ ಅಂಚುಳ್ಳ ಬಣ್ಣ ಬಣ್ಣದ ವೃತ್ತಾಕಾರದ ಕ್ಷೇತ್ರದಂತೆ ಇದು ಗೋಚರಿಸುತ್ತದೆ. ಈ ವಿಷಯದಲ್ಲಿ ಮಾರಾಟಸ್ ವರ್ಗದ ಜೇಡಗಳು ನವಿಲನ್ನು ಹೋಲುತ್ತವೆ. ಮೂರನೆ ಜೊತೆ ಕಾಲುಗಳನ್ನು ಸಹ ಮೇಲಕ್ಕೆತ್ತಿ ಬಿಳಿ ಬಣ್ಣದ ತುದಿಯುಳ್ಳ ಕಪ್ಪು ಬಣ್ಣದ ಕೂದಲಿರುವ ಬ್ರಶ್ ಅನ್ನು ತೋರಿಸುತ್ತದೆ. ಗಂಡು ಜೇಡವು, ಹೆಣ್ಣು ಜೇಡದ ಸಾಮಿಪ್ಯಕ್ಕೆ ಹೋಗ ಬಯಸಿ ಕಾಲುಗಳನ್ನು, ಬಾಲವನ್ನು ಮೇಲಕ್ಕೆ ಆಡಿಸುತ್ತಾ ಹೊಟ್ಟೆಯನ್ನು ಅಲುಗಾಡಿಸುತ್ತಾ, ಅತ್ತಲೊಮ್ಮೆ ಇತ್ತಲೊಮ್ಮೆ ತೊನೆಯುತ್ತಾ ನೃತ್ಯ ಮಾಡುತ್ತದೆ. ಈ ವರ್ಗಕ್ಕೆ ಸೇರಿದ ಜೇಡಗಳು ವಿಷಕಾರಿಯಲ್ಲವಾದ್ದರಿಂದ ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ತೊಂದರೆಯನ್ನುಂಟು ಮಾಡುವುದಿಲ್ಲ. ಮೊತ್ತ ಮೊದಲು ನವಿಲು ಜೇಡದ ಫೋಟೊ ಹಾಗೂ ವೀಡಿಯೊವನ್ನು ಸೆರೆಹಿಡಿದಿದ್ದು ಸಿಡ್ನಿಯ ವಿಜ್ಞಾನಿ ಡಾ. ಜರ್ಜೆನ್ ಒಟೋ.

■ **ಪ್ರಿಯಾಂಕ ವಿ. ಹೆಚ್.**



